ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು

<u>ಸ್ಪೆಷಲ್ ಕೇಸ್ ನಂ.**17/2024**</u>

ಫಿರ್ಯಾದುದಾರರು ರಾಜ್ಯದ ಪರವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಿಕ್ಕಮಗಳೂರು.

ವಿರುದ್ಧ

ಆರೋಪಿತರು ಗಿರೀಶ ಮತ್ತು ಗಣೇಶ

<u>ದೋಷಾರೋಪಣೆ</u>

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್‌ಎಲ್.ಎಂ., ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ ನ್ಯಾಯಾಧೀಶರು, ಚಿಕ್ಕಮಗಳೂರು ಆದ ನಾನು, ಈ ಕೆಳಕಂಡ ಆರೋಪಿತರಾದಃ-

1 ಗಿರೀಶ ಬಿನ್ ಶ್ಯಾಮಸುಂದರ್ , 35 ವರ್ಷ ವಾಸಃ ಗೆದ್ಲೆಹಳ್ಳಿ ಗ್ರಾಮ ಕಸಬಾ ಹೋಬಳಿ ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

2 ಗಣೇಶ ಬಿನ್ ಲೇಟ್ ಸ್ವಾಮಿನಾಥ , 35 ವರ್ಷ ವಾಸಃ ಗೆದ್ಲೆಹಳ್ಳಿ ಗ್ರಾಮ ಕಸಬಾ ಹೋಬಳಿ ಕಡೂರು ತಾಲೂಕು, ಚಿಕ್ಕಮಗಳೂರು ಜಿಲ್ಲೆ.

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ05-01-2022 ರಂದು ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಚಿಕ್ಕಮಗಳೂರು ಇವರು ಕಛೇರಿಯ ತಾಂತ್ರಿಕ ಅಧಿಕಾರಿ ಹಾಗೂ ಕಿರಿಯ ಅಭಿಯಂತರ ರವರೊಂದಿಗೆ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು, ನಗದಿಯಾತ್ ಕಾವಲ್ ನ ಸರ್ವೆ ನಂಬರ್ 8 ಮತ್ತು 10 ಜಮೀನಿನಲ್ಲಿ ನಡೆಯುತ್ತಿರುವ ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸಾಗಾಣಿಕೆ ಪ್ರದೇಶಕ್ಕೆ ಹಠಾತ್ ದಾಳಿ ನಡೆಸಿದಾಗ, ಆರೋಪಿತರಾದ ನೀವು, ಸರ್ಕಾರದ ಅನುಮತಿ ಅಥವಾ ಪರವಾನಿಗೆ ಇಲ್ಲದೆ, ಸದರಿ ಸ್ಥಳದಲ್ಲಿ ಅನಧಿಕೃತ ಕಲ್ಲು ಗಣಿಗಾರಿಕೆ ಮಾಡಿರುವುದು ಕಂಡುಬಂದಿದ್ದು, ಆ ಮೂಲಕ ಗಣಿ ಮತ್ತು ಖನಿಜಗಳು ( ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 4(1) ಸಹ ಕಲಂ 21 ರಡಿಯಲ್ಲಿ ಶಿಕ್ಷಾರ್ಹ

ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸುಮಾರು 4300 ಮೆ.ಟನ್ ಕಟ್ಟಡ ಕಲ್ಲನ್ನು ತೆಗೆದು, ಸರ್ಕಾರದ ಅನುಮತಿ ಅಥವಾ ಪರವಾನಿಗೆ ಇಲ್ಲದೆ ಗಣಿಗಾರಿಕೆ ಮಾಡಿ ಸಾಗಾಣೆ ಮಾಡಿರುತ್ತೀರಿ, ಆ ಮೂಲಕ ಗಣಿ ಮತ್ತು ಖನಿಜಗಳು ( ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಕಲಂ 4(1 ಎ) ಸಹ ಕಲಂ 21 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಚಿಕ್ಕಮಗಳೂರು ಇವರು ಕಲ್ಲು ಗಣಿಗಾರಿಕೆ ಸ್ಥಳವನ್ನು ಪರಿಶೀಲಿಸಿದಾಗ, ಆರೋಪಿತರಾದ ನೀವು ಸರ್ಕಾರಕ್ಕೆ ಯಾವುದೇ ರಾಯಧನ (royalty) ಅಥವಾ ಡೆಡ್ ರೆಂಟ್ ಪಾವತಿ ಮಾಡದೇ ಮತ್ತು ಯಾವುದೇ ಖನಿಜ ರವಾನೆ ಪರವಾನಗಿ ಸುಮಾರು 4300 ಮೆ.ಟನ್ ಕಟ್ಟಡ ಕಲ್ಲನ್ನು ಗಣಿಗಾರಿಕೆ ಮಾಡಿ ಸಾಗಾಣಿಕೆ ಮಾಡಿರುತ್ತೀರಿ, ಆ ಮೂಲಕ ಕರ್ನಾಟಕ ಸಣ್ಣ ಖನಿಜ ರಿಯಾಯಿತಿ ನಿಯಮಗಳು 1994 ರ ನಿಯಮ 3(1), 36(3), 42(1) ಸಹ ಕಲಂ 44 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 18 ನೇ ದಿವಸ ಸೆಪ್ಟೆಂಬರ್ ಮಾಹೆಯ 2025 ನೇ ಇಸವಿಯಂದು.

sd

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಚಿಕ್ಕಮಗಳೂರು.

<u>1 ನೇ ಆರೋಪಿ - ಗಿರೀಶ</u>

<u>ಆರೋಪಿಯ ಆಪಾದನೆ</u>

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು

ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು

(ದಿನಾಂಕ 18 ನೇ ದಿವಸ ಸೆಪ್ಟೆಂಬರ್ ಮಾಹೆಯ 2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಚಿಕ್ಕಮಗಳೂರು.

<u>2 ನೇ ಆರೋಪಿ - ಗಣೇಶ</u>

<u>ಆರೋಪಿಯ ಆಪಾದನೆ</u>

ಪ್ರಶ್ನೆ -1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ: ತಿಳಿಯಿತು

ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು

(ದಿನಾಂಕ 18 ನೇ ದಿವಸ ಸೆಪ್ಟೆಂಬರ್ ಮಾಹೆಯ 2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

RAJESHWARI N HEGDE
Digitally signed by RAJESHWARI N HEGDE
Date: 2025.09.18 16:58:44 +0530

ಸಹಿ
(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಚಿಕ್ಕಮಗಳೂರು.

***mvp/-**